## ಜೀನ್ಸ್ ಕಿವಿಯೋಲೆ ಹೀಗೆ ಮಾಡಿ...

ಮೊದಲಿಗೆ ಜೀನ್ಸ್ ಬಟ್ಟೆಯನ್ನು ನಿಮಗೆ ಬೇಕಾದ ಆಕಾರದಲ್ಲಿ ಕತ್ತರಿಸಿ ಒಂದು ದಪ್ಪಗಿರುವ ಅದೇ ವಿನ್ಯಾಸದ ಪೇಪರ್ ಅಥವಾ ರಟ್ಟಿಗೆ ಅಂಟಿಸಿಕೊಳ್ಳಬೇಕು. ಮಾರುಕಟ್ಟೆಯಲ್ಲಿ ಸಿಗುವ ಫ್ಯಾಬ್ರಿಕ್ ಗ್ಲೂ ತಂದು ಅಂಟಿಸಲು ಉಪಯೋಗಿಸಿದರೆ ಸಾಕು.

ಬಟ್ಟೆಯ ಮುಂಭಾಗಕ್ಕೆ ಗ್ರ್ಯಾಂಡ್ ಲುಕ್ ನೀಡುವ ಗೋಲ್ಡನ್, ಸಿಲ್ವರ್ ಮಣಿಗಳು, ಅಥವಾ ಕಲರ್‌ಫುಲ್ ಕುಂದನ್, ಇಲ್ಲವೇ ನಿಮಗೆ ಬೇಕಾದ ಅಲಂಕಾರಿಕ ವಸ್ತುಗಳನ್ನು ಅಳವಡಿಸಿ ಮಾರುಕಟ್ಟೆಯಲ್ಲಿ ಸಿಗುವ ಕಿವಿಯೋಲೆಯ ಹುಕ್‌ಗಳಿಗೆ ಜೋಡಿಸಿದರೆ ಸಾಕು. ಸುಂದರವಾದ ಆಕರ್ಷಕ ಕಿವಿಯೋಲೆ ರೆಡಿ. ನಿಮ್ಮ ನಿಮ್ಮ ಸೃಜನಶೀಲತೆಗೆ ಅನುಸಾರವಾಗಿ ಸಾಕಷ್ಟು ವಿಧದ ಕಿವಿಯೋಲೆಗಳನ್ನು ಮನೆಯಲ್ಲಿಯೇ ತಯಾರಿಸಬಹುದು.





ಚೌಕಾಕಾರ, ತ್ರಿಕೋನ, ಸ್ಟಾರ್ ಹೀಗೆ ವಿವಿಧ ಆಕಾರ, ವಿನ್ಯಾಸಗಳಲ್ಲಿ ಲಭ್ಯ. ಇವುಗಳ ಮೇಲೆ ಅಲಂಕಾರಿಕ ವಸ್ತುಗಳಾದ ಮಣಿ, ಕುಂದನ್, ಮಿರರ್ ಅಲ್ಲದೆ ಬೇರೆ ಬೇರೆ ತರಹದ ಡಾಲರ್‌ಗಳನ್ನು, ಸ್ಟಿಕ್ಕರ್‌ಗಳನ್ನೂ ಕೂಡ ಅಂಟಿಸಬಹುದಾಗಿದೆ. ಇವಿಷ್ಟೇ ಅಲ್ಲದೆ ಇವುಗಳಲ್ಲಿಯೇ ಹ್ಯಾಂಗಿಂಗ್ಸ್‌ಗಳನ್ನೂ ಕೂಡ ತಯಾರಿಸಬಹುದು.

ಈ ತರಹದ ಇಯರ್ ರಿಂಗ್ಸ್‌ಗಳು ಆಧುನಿಕ ಮತ್ತು ಸಾಂಪ್ರದಾಯಿಕ ಬಟ್ಟೆಗಳಿಗೂ ಚೆನ್ನಾಗಿ ಕಾಣುತ್ತವೆ. ಶುಭ ಸಮಾರಂಭಕ್ಕೆ ಹೋಗುವಾಗ ಧರಿಸುವ ರೇಷ್ಮೆ ಸೀರೆ, ಗಾಗ್ರ, ಲೆಹಂಗಾ ಎಲ್ಲದಕ್ಕೂ ಮ್ಯಾಚ್ ಆಗುವ ರೀತಿಯಲ್ಲಿ ಗ್ರಾಂಡ್ ಲುಕ್ ನೀಡುವ ಮಿರರ್, ಕಲರ್‌ಫುಲ್ ಕುಂದನ್‌ಗಳನ್ನು ಅಳವಡಿಸಿದ ಇಯರ್ ರಿಂಗ್ಸ್ ಧರಿಸಬಹುದು. ಇದು ನಿಮಗೆ ಮಾಡರ್ನ್ ಲುಕ್ ನೀಡುತ್ತದೆ.

ಪಾರ್ಟಿಗಳಿಗೆ ಹೋಗುವಾಗ ಚಿಕ್ಕ ಚಿಕ್ಕ ಹ್ಯಾಂಗಿಂಗ್ಸ್ ತರಹದ ಇಯರ್ ರಿಂಗ್ಸ್ ಕೂಡ ಧರಿಸಬಹುದು. ಈ ತರಹದ ಇಯರ್ ರಿಂಗ್ಸ್ ತಯಾರಿಸುವುದು ಅತ್ಯಂತ ಸುಲಭ.





### ಫ್ಯಾಬ್ರಿಕ್ ಬ್ರೇಸ್ಲೆಟ್

ಕಲರ್‌ಫುಲ್ ಬಳೆಗಳನ್ನೂ ತಯಾರಿಸಲು ಕೂಡ ಈ ಫ್ಯಾಬ್ರಿಕ್ ಬಳಸಬಹುದಾಗಿದೆ. ಯಾವುದೇ ಉಡುಪಿರಲಿ ಅದಕ್ಕೆ ಮ್ಯಾಚ್ ಆಗುವ ಬಳೆಗಳಿದ್ದರೆ ಎಷ್ಟು ಚೆನ್ನ ಎಂದು ಅನ್ನಿಸದೇ ಇರದು. ಇಂಥ ಸಮಯದಲ್ಲಿ ನೀವು ಧರಿಸುವ ಉಡುಪಿನ ಸ್ವಲ್ಪ ಬಟ್ಟೆ ಮಿಕ್ಕಿದ್ದರೆ ಸಾಕು. ಅದರಿಂದಲೇ ಸುಂದರವಾದ ಬಳೆ ತಯಾರಿಸಬಹುದು.

ನಿಮ್ಮ ಬಳಿ ಇರುವ ಹಳೆಯ ಪ್ಲಾಸ್ಟಿಕ್ ಬಳೆ, ಗಾಜಿನ ಬಳೆ ಇಲ್ಲವೇ ಒಂದು ದಪ್ಪ ಇಲಾಸ್ಟಿಕ್ ಇದ್ದರೆ ಸುಂದರವಾದ ಬ್ರೇಸ್ಲೆಟ್ ರೆಡಿ ಮಾಡಬಹುದು. ಬಟ್ಟೆಯನ್ನು ಉದ್ದಕ್ಕೆ ಕತ್ತರಿಸಿ ಒಂದು ಭಾಗ ಮಾತ್ರ ಹೊಲಿದು ಮಧ್ಯಭಾಗಕ್ಕೆ ಇಲಾಸ್ಟಿಕ್ ಅಥವಾ ಬಳೆ ತೂರಿಸಿ ಹೊಲಿದರೆ ಸಾಕು. ಎರಡೇ ನಿಮಿಷದಲ್ಲಿ ಮ್ಯಾಚಿಂಗ್ ಬ್ರೇಸ್ಲೆಟ್ ರೆಡಿ.

### ಗೋಟಾ, ಬ್ರೊಕೇಡ್ ಫ್ಯಾಬ್ರಿಕ್ ಲೇಸ್

ಮದುವೆ, ಮೆಹಂದಿ, ಅರಿಶಿಣ ಶಾಸ್ತ್ರ, ಸೀಮಂತ ಇಂತಹ ಸಮಾರಂಭಗಳಲ್ಲಿ ಈ ಗೋಟಾ ಫ್ಯಾಬ್ರಿಕ್ ಆಭರಣಗಳ ಟ್ರೆಂಡ್ ಹೆಚ್ಚಾಗಿದೆ. ಗೋಲ್ಡನ್ ಗೋಟಾ ಲೇಸ್‌ಗಳನ್ನು ಬಳಸಿ ಮಾಡಲಾದ ಗ್ಲಿಟ್ಟರ್ ಫ್ಯಾಬ್ರಿಕ್ ಆಭರಣಗಳು ಇದೀಗ ಫ್ಯಾಷನ್ ಪ್ರಿಯರ ಹಾಟ್ ಫೇವರೆಟ್. ಇದರಿಂದ ತಯಾರಿಸಲಾದ ಚಾಂದ್ಬಾಲಿ, ಜುಮುಕಿ, ಸ್ಟಡ್‌ಗಳು ಗ್ರ್ಯಾಂಡ್ ಲುಕ್ ನೀಡುತ್ತದೆ. ಮಹಿಳೆಯರು ತಾವು ಧರಿಸುವ ಗ್ರ್ಯಾಂಡ್ ಸೀರೆ, ಲೆಹಂಗಾ, ಗಾಗ್ರಾಗಳಿಗೆ ಮ್ಯಾಚ್ ಮಾಡಿ ಈ ತರಹದ ಗೋಟಾ ಫ್ಯಾಬ್ರಿಕ್ ಆಭರಣಗಳನ್ನು ಈಗೀಗ ಧರಿಸುತ್ತಿದ್ದಾರೆ.

ಇವುಗಳ ಜೊತೆಗೆ ಬ್ರೊಕೇಡ್ ಫ್ಯಾಬ್ರಿಕ್‌ನಿಂದ ತಯಾರಿಸಲಾದ ಜುಮುಕಿ, ಬಳೆ, ಫಿಂಗರ್ ರಿಂಗ್‌ಗಳು ಕೂಡ ಟ್ರೆಂಡ್ ಅನ್ನೇ ಸೃಷ್ಟಿಸಿವೆ. ಫ್ಯಾಬ್ರಿಕ್ ಬೀಡ್ಸ್‌ನಿಂದ ತಯಾರಿಸಲಾದ ದೊಡ್ಡ ದೊಡ್ಡ ಪದಕದಿಂದ ಕೂಡಿದ ಹಾರಗಳು ಕೂಡ ಇದೀಗ ಫ್ಯಾಷನ್ ಟ್ರೆಂಡ್. ■